

# ಈ 'ವಿಕ್ರಮ್' ಕಾಲದಲ್ಲಿ ಆ 'ವಿಕ್ರಮ್' ನೆನಕೆ

■ ವಿಶಾಖ ಎನ್.

ಕಮಲ ಹಾಸನ್ ಅಭಿನಯದ ಚಿತ್ರವೊಂದು ತೆರೆಕಾಣುವ ಮೊದಲ ಸಾಕಷ್ಟು ಸದ್ದು ಮಾಡುವುದು ಸಹಜ. ಈಗ 'ವಿಕ್ರಮ್' ತಮಿಳು ಸಿನಿಮಾ ವಿಷಯದಲ್ಲಿ ಆಗುತ್ತಿರುವುದೂ ಅದೇ. ಅದರ ಟ್ರೈಲರ್ ಮೇ 15ಕ್ಕೆ ಬಿಡುಗಡೆಯಾಯಿತು. ಎರಡೇ ದಿನಗಳಲ್ಲಿ ಎರಡು ಕೋಟಿಗೂ ಹೆಚ್ಚು ಜನರು ಅದನ್ನು ಯೂಟ್ಯೂಬ್‌ನಲ್ಲಿ ನೋಡಿದರು. ಲೋಕೇಶ್ ಕನಕರಾಜ್ ನಿರ್ದೇಶನದ ಸಿನಿಮಾ ಇದೆನ್ನುವುದು ಇನ್ನೊಂದು ವಿಶೇಷ. ಫಹಾದ್ ಫಾಸಿಲ್, ವಿಜಯ್ ಸೇತುಪತಿ ಇಬ್ಬರೂ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿರುವುದರಿಂದ ನಿರೀಕ್ಷೆಯ ಭಾರವೂ ಹೆಚ್ಚು.

1986ರಲ್ಲಿ ಕಮಲ ಹಾಸನ್ ಇದೇ ಹೆಸರಿನ ತಮಿಳು ಚಿತ್ರದಲ್ಲಿ ನಟಿಸಿದ್ದರು. ತಮ್ಮದೇ ಬ್ಯಾನರ್‌ನಲ್ಲಿ ಆ ಚಿತ್ರವನ್ನು ನಿರ್ಮಿಸಿದ್ದುದು ವಿಶೇಷ. 'ಕುಮುದಮ್' ವಾರಪತ್ರಿಕೆಯಲ್ಲಿ ಆ ಆ್ಯಕ್ಷನ್ ಚಿತ್ರದ ಕಥೆಯು ಧಾರಾವಾಹಿ ರೂಪದಲ್ಲಿ ಪ್ರಕಟವಾಗಿತ್ತು. ಆಗ ಈಗಿನಂತೆ ಸಾಮಾಜಿಕ ಜಾಲತಾಣಗಳು ಪ್ರಚಾರಕ್ಕೆ ಲಭ್ಯವಿರಲಿಲ್ಲ. ಹೀಗಾಗಿ ಕಮಲ ಹಾಸನ್ ವಾರಪತ್ರಿಕೆಯಲ್ಲಿ ಕಥೆಯನ್ನೇ ಕಂತುಗಳಲ್ಲಿ ಪ್ರಕಟಿಸುವ ಮಾರ್ಗವನ್ನು ಕಂಡುಕೊಂಡಿದ್ದರು.

ಈ ಕಾಲದ 'ವಿಕ್ರಮ್' ಮೇಲೆಯೂ ಪ್ರೇಕ್ಷಕರ ನಿರೀಕ್ಷೆ ಮಡುಗಟ್ಟಿದೆ. ಲೋಕೇಶ್ ಕನಕರಾಜ್ 'ಖೈದಿ' ಹಾಗೂ 'ಮಾಸ್ಟರ್' ತಮಿಳು ಸಿನಿಮಾಗಳಿಂದ ಕಮರ್ಷಿಯಲ್ ಆಗಿಯೂ ಪ್ರೇಕ್ಷಕರನ್ನು ಹಿಡಿದಿಡುವ ನಿರ್ದೇಶಕ ಎಂದು ಗುರುತಾದವರು. ಅವರ ಇಮೇಜಿನ ಪ್ರಭಾವಳಿಯನ್ನು 'ವಿಕ್ರಮ್' ಎಷ್ಟರಮಟ್ಟಿಗೆ ಹೆಚ್ಚಿಸುವುದೋ ನೋಡಬೇಕು. ■

# ಅರ್ಜುನ್ ನಗೆಸಂದೇಶ



ಹಿಂದಿ ಸಿನಿಮಾ ಇತ್ತೀಚೆಗೆ ಮದುವೆಗಳಿಂದಾಗಿ ಸುದ್ದಿಯಾದದ್ದೇ ಹೆಚ್ಚು. ಕತ್ರಿನಾ ಕೈಫ್ ಹಾಗೂ ವಿಕ್ಕಿ ಕೌಶಲ್ ಇಬ್ಬರೂ ಗೃಹಸ್ಥಾಶ್ರಮ ಪ್ರವೇಶಿಸಿದ್ದನ್ನು ನೋಡಿ ಎಷ್ಟೋ ಮಂದಿ ಸಲ್ಮಾನ್ ಖಾನ್ ಪ್ರತಿಕ್ರಿಯೆ ಹೇಗಿದ್ದೀತು ಎಂದು ತಲೆಕೆಡಿಸಿಕೊಂಡಿದ್ದರು. ಅಲಿಯಾ ಭಟ್ ಹಾಗೂ ರಣಬೀರ್ ಕಪೂರ್ ಹಸೆಮಣೆ ಏರುವ ಮೊದಲು, ಇಬ್ಬರೂ ನಿಜಕ್ಕೂ ಅಂತಹ ಬಂಧಕ್ಕೆ ಒಳಪಡುವರೇ ಎಂಬ ಪ್ರಶ್ನೆ ಅನೇಕರಲ್ಲಿ ಇತ್ತು. ಈಗ ಮಲೈಕಾ ಅರೋರಾ ಹಾಗೂ ಅರ್ಜುನ್ ಕಪೂರ್ ಇಬ್ಬರೂ ಹೊಸ ಬಾಳಿನ ಹೊಸಿಲಿನೆದುರು ನಿಲ್ಲಲು ಸಜ್ಜಾಗಿದ್ದಾರೆ ಎಂದು ಸುದ್ದಿ.

ನಾಲ್ಕು ವರ್ಷಗಳಿಂದ ಪ್ರೇಮಿಗಳಾಗಿಯೇ ಜಗತ್ತಿನೆದುರು ಗುರುತಿಸಿಕೊಂಡಿರುವ ಈ ಇಬ್ಬರೂ ಬರುವ ಚಳಿಗಾಲದಲ್ಲಿ ಮದುವೆಯಾಗಲು ನಿರ್ಧರಿಸಿದ್ದಾರೆ. ಸರಳವಾಗಿ ಮದುವೆಯಾಗಿ, ಆಪ್ತೇಷ್ಟರಿಗೆ ಆಮೇಲೆ ಒಂದು ಔತಣಕೂಟ ಏರ್ಪಡಿಸಬೇಕು ಎನ್ನುವುದು ಅವರ ಯೋಜನೆ.

ಮಲೈಕಾ ಹಾಗೂ ಅರ್ಜುನ್ ಇಬ್ಬರ ಪ್ರೇಮಕ್ಕೆ ಮೊದಲಿನಿಂದ ಸಾಕ್ಷಿಯಾಗಿರುವ ಕರೀನಾ ಕಪೂರ್ ಮದುವೆಗೆ ಹಾಜರಾಗುವುದು ಖಾತರಿ. ಕಪೂರ್ ಕುಟುಂಬದ ಅನೇಕರು ಅದರಲ್ಲಿ ಪಾಲ್ಗೊಳ್ಳುವುದೂ ನಿಕ್ಕಿಯಾಗಿದೆ. ಚಳಿಗಾಲವೆಂದರೆ ಮಲೈಕಾ–ಅರ್ಜುನ್‌ಗೆ ಇಷ್ಟ. ಅದಕ್ಕೇ ಅದು ಮದುವೆಯಾಗಲು ಸುಸಮಯ ಎಂದು ಅವರು ನಿರ್ಧರಿಸಿದ್ದಾರೆ ಎಂದೆಲ್ಲ ಸುದ್ದಿಗಳಿವೆ.

ಮುಂಬೈನಲ್ಲಿಯೇ ಸರಳವಾಗಿ ಮದುವೆ ಆಗಬೇಕೆಂದು ಬಯಸಿರುವ ಈ ಜೋಡಿ, ಅದಕ್ಕೆ ಕರೆಯಬೇಕಾದವರ ಹೆಸರುಗಳನ್ನೆಲ್ಲ ಪಟ್ಟಿ ಮಾಡತೊಡಗಿದೆ. ಉಡುಗೆ ಹೇಗಿರಬೇಕು ಎಂದೂ ಈಗಲೇ ನಿರ್ಧರಿಸಿಯಾಗಿದೆ. ಮದುವೆಗೆ ಮಲೈಕಾ ಸೀರೆ ಉಡಲು ತೀರ್ಮಾನಿಸಿರುವುದನ್ನೇ ಕೆಲವು ಮಾಧ್ಯಮಗಳು ವಿಶೇಷ ಸುದ್ದಿಯಾಗಿ ಬಿತ್ತರಿಸಿವೆ.

ಮಲೈಕಾಳೊಂದಿಗಿನ ತಮ್ಮ ಮದುವೆಯ ಕುರಿತ ಸುದ್ದಿಗಳೆಲ್ಲವನ್ನೂ ಓದಿದ ನಂತರ ಅರ್ಜುನ್ ಕಪೂರ್ ಇನ್‌ಸ್ಟಾಗ್ರಾಂನಲ್ಲಿ ಒಂದು ಪೋಸ್ಟ್ ಹಾಕಿದರು. ಅದು ಹೀಗಿದೆ: 'ನನ್ನ ಬದುಕಿನ ಬಗೆಗೆ ನನಗಿಂತಲೂ ಎಷ್ಟೆಲ್ಲ ಜನರಿಗೆ ಹೆಚ್ಚಿನ ಸಂಗತಿ ಗೊತ್ತಾಗಿದೆ ಎಂದು ತಿಳಿಯುವುದೇ ಖುಷಿಯ ವಿಷಯ'. ಈ ಪೋಸ್ಟ್‌ನ ಪಕ್ಕ ನಗೆಯ ಎಮೋಜಿಯೊಂದನ್ನೂ ಅವರು ಹಾಕಿದ್ದಾರೆ.

ಅಂದಹಾಗೆ, ತಮ್ಮ ಮದುವೆಯ ಕುರಿತು ಮಲೈಕಾ ಆಗಲೀ ಅರ್ಜುನ್ ಆಗಲೀ ಈವರೆಗೆ ಅಧಿಕೃತವಾಗಿ ಏನನ್ನೂ ಸ್ಪಷ್ಟಪಡಿಸಿಯೇ ಇಲ್ಲ. ■